**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 360/2022 |
| ಸಿ.ಡಬ್ಲ್ಯೂ | 1 |
| ಪಿ.ಡಬ್ಲ್ಯೂ | 2 |

| | | |
|---|---|---|
| ಹೆಸರು | :- | ಶಿವಶಂಕರ ಮುಕರಿ |
| ತಂದೆ/ಗಂಡನ ಹೆಸರು | :- | ಅಲ್ಲಪ್ಪ |
| ವಯಸ್ಸು | :- | 39 ವರ್ಷ |
| ಉದ್ಯೋಗ | :- | ಪಿ.ಎಸ್.ಐ, ರಾಯಬಾಗ ಠಾಣೆ |
| ವಾಸಸ್ಥಳ | :- | ರಾಯಬಾಗ |

ಸಾಕ್ಷಿಯನ್ನು ದಿಃ17.08.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ

1. 2019 ರಿಂದ 2022 ರವರೆಗೆ ಲೋಕಾಪೂರ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ19.06.2022 ರಂದು ಸಂಜೆ 4-30 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ, ಜೆ.ಕೆ. ಸಿಮೆಂಟ್ ಪ್ಯಾಕ್ಟರಿ ಹತ್ತಿರ ಸಾರ್ವನಿಜಕ ಸ್ಥಳದಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಸದರಿ ವಿಷಯವನ್ನು ಮೇಲಾಧಿಕಾರಿಯವರಿಗೆ ತಿಳಿಸಿ, ಠಾಣಾ ಸಿಬ್ಬಂದಿಗಳಾದ ಚಾಸಾ-4 ರಿಂದ ಚಾಸಾ-7 ರವರಿಗೆ ಬಾತ್ಮಿ ವಿಷಯ ತಿಳಿಸಿ, ಚಾಸಾ-4 ರವರ ಮೂಲಕ ಇಬ್ಬರು ಪಂಚರಾದ ಚಾಸಾ-2 ಮತ್ತು ಚಾಸಾ-3 ರವರನ್ನು ಠಾಣೆಯಿಂದ 4-45 ಗಂಟೆಗೆ ಹೊರಟು 5-00 ಗಂಟೆಗೆ ಘಟನಾ ಸ್ಥಳವನ್ನು ತಲುಪಿ, ಜೀಪನ್ನು ಮರೆಯಾಗಿ ನಿಲ್ಲಿಸಿ ವಾಚ್ ಮಾಡಿ ನೋಡಲಾಗಿ, ಒಬ್ಬ ವ್ಯಕ್ತಿ ತನ್ನ ಕೈ ಚೀಲದಿಂದ ಸಾರಾಯಿ ಪಾಕೆಟಗಳನ್ನು ಸಾರ್ವಜನಿಕರಿಗೆ ನೀಡಿ ಹಣ ಪಡೆಯುತ್ತಿದದ್ದು, ಕಂಡು ಬಂದಿತು, ಅಕ್ರಮ ಸಾರಾಯಿ ಮಾರಾಟ ಮಾಡುತ್ತಿದ್ದರಿಂದ 5-15 ಗಂಟೆಗೆ ನಾವೆಲ್ಲರೂ ರೇಡ ಮಾಡಿದ್ದು, ಅಲ್ಲಿ ಸಾರಾಯಿ ಖರೀದಿಸಲು ಬಂದ ಸಾರ್ವನಿಜಕರು ಓಡಿ ಹೋಗಿದ್ದು, ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ದೇವರಾಜ್ ವಿಠ್ಠಲ ಸಾಲಮಂಟಪಿ, ಸಾ-ನಿಂಗಾಪೂರ ಎಂದು ತಿಳಿಸಿದನು. ಪಂಚರ ಸಮಕ್ಷಮ ಅಂಗಜಪ್ತಿ ಮಾಡಲಾಗಿ ಅವನ ಬಳಿ ಇದ್ದ ಕೈ ಚೀಲದಲ್ಲಿ ವೆಲಿಂಗಟನ್ ಮಾಲ್ಟ ವಿಸ್ಕಿಯ 90 ಎಮ್.ಎಲ್ ಅಳತೆಯ 33 ಟೆಟ್ರಾ ಪ್ಯಾಕಗಳು ಇದ್ದವು, ಆತನ ಅಂಗ ಜಪ್ತಿಯಲ್ಲಿ ರೂ.130/- ಗಳು ದೊರಕಿದವು. ಪಂಚರ ಸಮಕ್ಷಮ ಸಾರಾಯಿ ಪಾಕೆಟಗಳನ್ನು, ಹಣವನ್ನು ಜಪ್ತು ಪಡಿಸಿಕೊಂಡು ಆರೋಪಿತನನ್ನು ದಸ್ತಗಿರಿ ಮಾಡಿ, ರಾಸಾಯನಿಕ ಪರೀಕ್ಷೆಗಾಗಿ ಎಲ್ಲಾ 33 ಟೆಟ್ರಾ ಪ್ಯಾಕಗಳನ್ನು ರಟ್ಟಿನ ಬಾಕ್ಸನಲ್ಲಿ ಹಾಕಿ, ದಾರಿದಿಂದ ಕಟ್ಟಿ, ಇಲಾಖಾ ಸೀಲ್ ಹಾಕಿ ನನ್ನ ಮತ್ತು ಚಾಸಾ-2 ಹಾಗೂ

ಚಾಸಾ-3 ರವರ ಸಹಿ ಉಳ್ಳ ಚೀಟಿಯನ್ನು ಅಂಟಿಸಲಾಯಿತು. ಪಂಚನಾಮೆಯನ್ನು ಸ್ಥಳದಲ್ಲಿ 5-15 ರಿಂದ 6-15 ಗಂಟೆಯವರೆಗೆ ಬರೆಯಲಾಯಿತು. ನಂತರ ವಶಪಡಿಸಿಕೊಂಡ ಮುದ್ದೆ ಮಾಲು, ಆರೋಪಿತನನ್ನು ಠಾಣೆಗೆ ತೆಗೆದುಕೊಂಡು ಬಂದು 6-45 ಗಂಟೆಗೆ ಸರಕಾರದ ತರ್ಫೆ ದೂರನ್ನು ಚಾಸಾ-11 ರವರಿಗೆ ನೀಡಿರುತ್ತೇನೆ.

2. ಸಾಕ್ಷಿಗೆ ಈಗ ನಿಪಿ-1 ತೋರಿಸುತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ ಮತ್ತು ದೂರನ್ನು ತೋರಿಸುತ್ತಿದ್ದು, ಅವುಗಳ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ದೂರನ್ನು ನಿಪಿ-2 ಮತ್ತು ಪ್ರ.ವ.ವ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ಕ್ರಮವಾಗಿ ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ 33 ಟೆಟ್ರಾ ಪ್ಯಾಕಗಳು ಇದ್ದ ರಟ್ಟಿನ ಬಾಕ್ಸ ತೋರಿಸುತ್ತಿದ್ದು, ಅದನ್ನು ಮುಮಾ-1 ಎಂದು, ಕೈ ಚೀಲವನ್ನು ಮುಮಾ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ರೂ.130/- ರೂಗಳನ್ನು ತೋರಿಸುತ್ತಿದ್ದು ಅವುಗಳನ್ನು ಅವರು ಗುರುತಿಸಿದ್ದರಿಂದ ಅದನ್ನು ಮುಮಾ-3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲು : ಶ್ರೀ.ಟಿ.ಸಿ.ಬಿ ವಕೀಲರಿಂದ ಆರೋಪಿ ಪರವಾಗಿ</u>

1. ಪಂಚರನ್ನು ಚಾಸಾ-4 ರವರು ಎಲ್ಲಿಂದ ಕರೆದುಕೊಂಡು ಬಂದಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನೀವು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ನ್ಯಾಯಾಧೀಶರಿಂದ ಸರ್ಚ ವಾರೆಂಟ್ ಪಡೆದುಕೊಂಡಿರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸಂಜೆ 4-30 ಕ್ಕೆ ಮಾಹಿತಿ ಬಂದಿದ್ದು, 4-45 ಗಂಟೆಗೆ ಠಾಣೆಯಲ್ಲಿ ಎಲ್ಲರೂ ಸೇರಿದ್ದರು. ಠಾಣೆಯಿಂದ ಘಟನಾ ಸ್ಥಳ ಎಷ್ಟು ಅಂತರದಲ್ಲಿ ಇದೆ ಎಂದರೆ 2 ರಿಂದ 3 ಕಿ.ಮೀ ಅಂತರದಲ್ಲಿ ಇದೆ ಎಂದು ಸಾಕ್ಷಿ ಹೇಳುತ್ತಾರೆ. ನಾವು ಜೆ.ಕೆ. ಸಿಮೆಂಟ್ ಪ್ಯಾಕ್ಟರಿಗೆ ಹೋಗುವ ರಸ್ತೆಯಲ್ಲಿ ಘಟನಾ ಸ್ಥಳದ ಸ್ವಲ್ಪ ದೂರ ಮರೆಯಾಗಿ ನಿಂತಿದ್ದೆನು. ರಸ್ತೆ ಬದಿಯಲ್ಲಿ ನಿಂತಿದ್ದು, ಬೇರೆ ಯಾವುದೇ ವಸ್ತು ಇರಲಿಲ್ಲ. ಆರೋಪಿತ 70 ರಿಂದ 80 ಪೂಟ ಅಂತರದಲ್ಲಿ ಇದ್ದನು. ನಾವು ಸಮವಸ್ತ್ರದಲ್ಲಿ ಹೋಗಿದ್ದೆವು. ನಾವು 15 ನಿಮಿಷ ವಾಚ್ ಮಾಡಿದೆವು. ಆರೋಪಿತ ನಾವು ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದನು. ಸಾರಾಯಿ ಖರೀದಿಸುತ್ತಿದ್ದ ಸಾರ್ವಜನಿಕರು ಯಾರು ಎಂದು ವಿಚಾರಣೆ ಮಾಡಿದಿರಾ ಎಂದರೆ ಸಿಗದ ಕಾರಣ ವಿಚಾರಣೆ ಮಾಡಿಲ್ಲ ಎಂದು ಹೇಳುತ್ತಾರೆ. ಘಟನಾ ಸ್ಥಳದ ಚಕಬಂದಿ ಹೇಳಬಹುದಾ ಎಂದರೆ ಪಂಚನಾಮೆ ನೋಡಿದರೆ ಹೇಳಬಹುದು ಎಂದು ಹೇಳುತ್ತಾರೆ. ಘಟನಾ

ಸ್ಥಳದಿಂದ ಜೆ.ಕೆ.ಫ್ಯಾಕ್ಟರಿ ಅರ್ಧ ಕಿ.ಮೀ ಅಂತರದಲ್ಲಿ ಇದೆ. ಘಟನಾ ಸ್ಥಳದ ಅಕ್ಕ-ಪಕ್ಕ ಅಂಗಡಿಗಳು ಇದ್ದವಾ ಎಂದರೆ ಸ್ವಲ್ಪ ದೂರದಲ್ಲಿ ಇದ್ದವು ಎಂದು ಹೇಳುತ್ತಾರೆ. ಘಟನಾ ಸ್ಥಳದ 50 ಮೀಟರ ಅಂತರದಲ್ಲಿ ಎಮ್.ಎಸ್.ಐ.ಎಲ್ ಅಂಗಡಿ ಇದೆ ಎಂದರೆ ಸರಿಯಲ್ಲ. ಆರೋಪಿತನನ್ನು ಚಾಸಾ-4 ಮತ್ತು ಚಾಸಾ-6 ರವರು ಹಿಡಿದಿರುತ್ತಾರೆ. ಆ ರೀತಿ ದೂರನಲ್ಲಿ ನಿಖರವಾಗಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ ನಿಮ್ಮ ಪ್ರಕಾರ 33 ಬಾಟಲಗಳನ್ನು ಎಲ್ಲಿಂದ ತಂದ ಎಂದು ವಿಚಾರಣೆ ಮಾಡಿದ್ದೀರಾ ಎಂದರೆ ನಾನು ಮಾಡಿಲ್ಲ, ವಿಚಾರಣಾಧಿಕಾರಿ ಮಾಡಿರಬಹುದು ಎಂದು ಹೇಳುತ್ತಾರೆ. ಸಾಯಂಕಾಲ 5 ಗಂಟೆಗೆ ಜೆ.ಕೆ.ಸಿಮೆಂಟ್ ಫ್ಯಾಕ್ಟರಿ ಹತ್ತಿರ ಎಲ್ಲಾ ಕೆಲಸಗಾರರು ಕೆಲಸ ಮುಗಿದ ನಿಮಿತ್ಯ ಹೊರಗಡೆ ಬರುತ್ತಾರೆ ಎಂದರೆ ಯಾರು ಇರಲಿಲ್ಲ ಎಂದು ಹೇಳುತ್ತಾರೆ. ಅಕ್ಕ-ಪಕ್ಕದ ಅಂಗಡಿಯವರ ಹೇಳಿಕೆ ಪಡೆದಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಂಚನಾಮೆಯನ್ನು ಸ್ಥಳದಲ್ಲಿ ಪ್ರಿಂಟ್ ಮಾಡಿರುತ್ತಾರೆ. ನೀವು ಸ್ಥಳದಲ್ಲಿ ಯಾವುದೇ ವಿದ್ಯುತ್ ಸಂಪರ್ಕ ಇಲ್ಲದ ಕಾರಣ ಪ್ರಿಂಟ್ ತೆಗೆಯಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ. ವಾಹನದ ಬ್ಯಾಟರಿಯಿಂದ ಪ್ರಿಂಟ್ ತೆಗೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿ, ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಮಗೆ ಯಾವುದೇ ಬಾತ್ಮಿ ಬಂದಿಲ್ಲ, ನೀವು ಪಂಚರನ್ನು ಬರಮಾಡಿಕೊಳ್ಳಲು ಹೇಳಿಲ್ಲ, ಘಟನಾ ಸ್ಥಳಕ್ಕೆ ನೀವು ಹೋಗಿಲ್ಲ, ಮರೆಯಾಗಿ ನಿಂತು ವಾಚ್ ಮಾಡಿಲ್ಲ, ಆರೋಪಿತ ಯಾವುದೇ ಅಕ್ರಮ ಸಾರಾಯಿ ಮಾರಾಟ ಮಾಡುತ್ತಿರಲಿಲ್ಲ, ರಾಸಾಯನಿಕ ಪರೀಕ್ಷೆಗಾಗಿ ಮುದ್ದೆ ಮಾಲು ತೆಗೆದಿಲ್ಲ, ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೂ ಮತ್ತು ಮುಮಾ-1 ರಿಂದ 3 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಆಧಾರವಿಲ್ಲದೆ ಆರೋಪಿತನ ವಿರುದ್ಧ ಅಂಕಿ-ಸಂಖ್ಯೆಗಳಿಗೋಸ್ಕರ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ